

Himalayan Landscape





ಅಂತೂ ಇಂತೂ ಜೀವನದಲ್ಲಿ ಹಿಮಾಲಯಕ್ಕೆ ಹೋಗುವ ಯೋಗ ಕೂಡಿ ಬಂತು. ಹಿಮಾಲಯ ಪ್ರವಾಸ ನಿಶ್ಚಿತವಾಯಿತೆಂದರೆ, ಅದೊಂದು ಬಗೆಯಲ್ಲಿ ಮದುವೆಯ ನಿಶ್ಚಿತಾರ್ಥವಿದ್ದಂತೆ – ಹಗಲಿರುಳೂ ಕಾಡುವ ಸುಂದರ ಸ್ವಪ್ನಗಳು!

ಹಿಮಾಲಯದ ಅಂದ ಹೇಗಿರಬಹುದು? ಅಲ್ಲಿನ ಪರಿಸರ ಹೇಗಿರಬಹುದು? ಹೀಗೆ ಕನಸುಮನಸಿನ ತುಂಬಾ ಕಲ್ಪನೆಗಳೇ ಕಲ್ಪನೆಗಳು.

ವಿಮಾನ ಬೆಂಗಳೂರು ನೆಲದಿಂದ ಟೇಕ್‌ಆಫ್ ಆದಂತೆ ಸ್ವಪ್ನಮಾಲೆ ಮತ್ತಷ್ಟು ಎತ್ತರಕ್ಕೆ ಜಿಗಿದಂತೆ ಭಾವ. ಆದರೆ, ಅದೇನು ಕನಸಿನಲ್ಲಿ ಮೈಮರೆಯುವ ಸಮಯವಲ್ಲ. ಮೇಲೆ ಆಕಾಶ, ಕೆಳಗೆ ಹತ್ತಿಯ ಉಂಡೆಯಂತೆ